ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 19–12–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br><br>ಡಾ: ಬಿ. ಗುರಪ್ಪ ನಾಯ್ಡು<br>ಅಧ್ಯಕ್ಷರು<br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಸುವರ್ಣ ಮಹೋತ್ಸವ ಸಮಾರಂಭ ಅಂಗವಾಗಿ | 20–12–2014<br><br>ಶನಿವಾರ<br><br>ಅಪರಾಹ್ನ<br><br>12–00 ಗಂಟೆಗೆ | ಹೋಟೆಲ್ ಕ್ಯಾಪಿಟಲ್,<br><br>ರಾಜಭವನ ರಸ್ತೆ,<br><br>ಬೆಂಗಳೂರು |
| 2 | ಮನೆಯಂಗಳದಲ್ಲಿ ಮಾತುಕತೆ ತಿಂಗಳ ಅತಿಥಿ ಕಾರ್ಯಕ್ರಮ:<br><br>ಪ್ರೊ. ಚಂದ್ರಶೇಖರ ಪಾಟೀಲ<br>ಸಾಹಿತಿಗಳು | 20–12–2014<br>ಶನಿವಾರ<br>ಸಂಜೆ 4–00 ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ

ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಬೆಳೆ ವಿಮಾ ಕಾರ್ಯಕ್ರಮದಡಿ (National Crop Insurance Programme-NCIP) 2014-15 ಹಿಂಗಾರು ಹಂಗಾಮಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಪಡಿಸಿ 10 ತೋಟಗಾರಿಕಾ ಬೆಳೆಗಳಾದ ಟೊಮ್ಯಾಟೊ (ನೀರಾವರಿ) ಈರುಳ್ಳಿ,(ನೀರಾವರಿ) ಆಲೂಗಡ್ಡೆ(ನೀರಾವರಿ) ಮೆಣಸಿನಕಾಯಿ (ನೀರಾವರಿ) ಬೆಳ್ಳುಳ್ಳಿ(ನೀರಾವರಿ) ಮಾವು, ದ್ರಾಕ್ಷಿ, ಕಿತ್ತಳೆ, ದಾಳಿಂಬೆ ಮತ್ತು ಗೋಡಂಬಿ (ಗೇರು) ಇವುಗಳನ್ನು 720 ಅಧಿಸೂಚಿತ ಕ್ಷೇತ್ರ ಘಟಕಗಳಲ್ಲಿ

(Reference unit area) ಹೋಬಳಿ ಮಟ್ಟಕ್ಕೆ ಅಳವಡಿಸಿ ವಿವಿಧ ವಿಮಾ ಸಂಸ್ಥೆಗಳಿಗೆ ಜಿಲ್ಲೆಗಳನ್ನು ಹಂಚಿಕೆ ಮಾಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಯೋಜನೆಯನ್ನು 8 ವಿಮಾ ಸಂಸ್ಥೆಗಳಗಾದ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ ಐ.ಸಿ.ಐ.ಸಿ.ಐ. ಲೊಂಬಾಡ್, ಜನರಲ್ ಇನ್ಸೂರೆನ್ಸ್ ಕಂಪನಿ ಲಿ, ಹೆಚ್.ಡಿ. ಎಫ್.ಸಿ. ಎರ್ಗೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ. ಚೋಳಮಂಡಲಮ್ ಎಂಎಸ್. ಜನರಲ್ ಇನ್ಸೂರೆನ್ಸ್ ಕಂಪನೆ, ಲಿ, ಇಫ್ಕೋ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿ, ರಿಲೆಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ, ಲಿ. ಫ್ಯೂಚರ್ ಜನರಲ್ ಇನ್ಸೂರೆನ್ಸ್ ಕಂಪಲಿ, ಲಿ. ಹಾಗೂ ಬಜಾಜ್ ಆಲಿಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿ. ಅನುಷ್ಠಾನಗೊಳಿಸುತ್ತಿವೆ.

ಈ ವಿಮಾ ಯೋಜನೆಯು ಬೆಳೆಸಾಲ ಪಡೆಯುವ ರೈತರಿಗೆ ಕಡ್ಡಾಯವಾಗಿದ್ದು, ಬ್ಯಾಂಕುಗಳು ಬೆಳೆ ಸಾಲದ ಮೊತ್ತಕ್ಕೆ ರೈತರ ವಿಮಾ ಕಂತನ್ನು ಹೆಚ್ಚುವರಿಯಾಗಿ ಮಂಜೂರು ಮಾಡತಕ್ಕದ್ದು.

ಈ ಯೋಜನೆಯ ಬೆಳೆ ಸಾಲ ಪಡೆಯದಂತಹ ರೈತರಿಗೆ ಐಚ್ಛಿಕವಾಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳಲು ಹತ್ತಿರದ ಬ್ಯಾಂಕುಗಳನ್ನು ಸಂಪರ್ಕಿಸಿ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲಾತಿಗಳಾದ ಪಹಣಿ/ಖಾತೆಪತ್ರ/ಕಂದಾಯ ರಸೀದಿ ನೀಡಬೇಕು. ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ವಿಮಾ ಕಂತನ್ನು ಕಟ್ಟಬೇಕು. ಬಿತ್ತನೆ ಧೃಢೀಕರಣ ಪತ್ರ ನೀಡುವ ಅಗತ್ಯವಿರುವುದಿಲ್ಲ.

ಈ ಯೋಜನೆಯಡಿ ಎಲ್ಲಾ ವರ್ಗದ ರೈತರು ಪಾಲ್ಗೊಳ್ಳಲು ಕೊನೆಯ ದಿನಾಂಕ 31-12-2014 ಆಗಿರುತ್ತದೆ.

ಈ ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆ ವಿಮಾ ಯೋಜನೆಯಡಿ ಪಾಲ್ಗೊಳ್ಳಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಬ್ಯಾಂಕುಗಳನ್ನು ಸಂಪರ್ಕಿಸಲು ಕೃಷಿ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಕೆ.ಓ.ಎಸ್. ಪರೀಕ್ಷೆ ಮುಂದೂಡಿಕೆ

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ)**

ಡಿಸೆಂಬರ್ 2014 ರ ಮಾಹೆಯಲ್ಲಿ ದಿನಾಂಕ 24-12-2014 ರಿಂದ 3-1-2015 ರವರೆಗೆ ನಡೆಯಬೇಕಾಗಿದ್ದ ಕರ್ನಾಟಕ ಮುಕ್ತ ಶಾಲೆ (ಕೆ.ಓ.ಎಸ್.) ಪರೀಕ್ಷೆಯನ್ನು ದಿನಾಂಕ 12-1-2015 ರಿಂದ 22-1-2015 ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

## ಬಾಲ ವೇದಿಕೆ ಕಾರ್ಯಕ್ರಮ

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ)**

ಬಾಲ ಭವನವು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅಂಗವಾಗಿ, ಶನಿವಾರ ಹಾಗೂ ಭಾನುವಾರಗಳಂದು "ಬಾಲ ವೇದಿಕೆ" ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದ್ದು ಈ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರು ಸಹ ಮಕ್ಕಳಿಗೆ ವಿವಿಧ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ.

ಡಿಸೆಂಬರ್ 20 ರಂದು ಭರತನಾಟ್ಯ ಕು. ಶರ್ವಾಣಿ ಕೆ.ಬಿ. ಭರತನಾಟ್ಯ ಕು. ಎಂ. ನಾಗಸಿಂದು, ಸಂಗೀತ ಕು. ದತ್ತಶ್ರೀ ಸುಧಾಕರ್, ಡಿಸೆಂಬರ್ 21 ರಂದು ಕನ್ನಡ ಶಿಶುಗೀತೆ/ಕಥೆ/ಕನ್ನಡ ಕಾಗುಣಿತದೊಂದಿಗೆ ಆಟ ಇತ್ಯಾದಿಗಳ ಸರಳ ಕನ್ನಡ ಕಾರ್ಯಕ್ರಮ ಶ್ರೀಮತಿ ದಿವ್ಯ ಜ್ಯೋತಿ ಯಶೋಧ ಇವರಿಂದ ಡಿಸೆಂಬರ್ 27 ರಂದು ಸ್ವ ರಕ್ಷಣೆ (ಸೆಲ್ಫ್ ಡಿಫೆನ್ಸ್) ಮೇಜರ್ ಭಾವನ ಇವರಿಂದ ಡಿಸೆಂಬರ್ 28 ರಂದು ಯಕ್ಷಗಾನ ಪ್ರದರ್ಶನ ಪ್ರಸಂಗ ಹಯಬಂಧನ ಗಾನಸೌರಭ ಯಕ್ಷಗಾನ ಸಂಸ್ಥೆಯ ಮಕ್ಕಳಿಂದ ಏರ್ಪಡಿಸಿದೆ ಎಂದು ಬಾಲಭವನದ ಪ್ರಕಟಣೆ ತಿಳಿಸಿದೆ.

## ಪತ್ರಕರ್ತ ಎಸ್. ಅಶೋಕ್‌ಬಾಬು ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ)**

ಪತ್ರಕರ್ತ ಎಸ್. ಅಶೋಕ್ ಬಾಬು ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಈ ಸಂಜೆ ಪತ್ರಿಕೆಯ ವರದಿಗಾರನಾಗಿ ಸುರಥಿ ಪತ್ರಿಕೆಯ ಸಂಪಾದಕರಾಗಿ ಕನ್ನಡ ಪತ್ರಿಕೋದ್ಯಮದಲ್ಲಿ ಎಲ್ಲರ ಗಮನ ಸೆಳೆದ ಅಶೋಕ್ ಬಾಬು ಅವರು ಕನ್ನಡ ಭಾಷೆಯ ಪ್ರಪ್ರಥಮ ಸುದ್ದಿ ಸಂಸ್ಥೆಯನ್ನು ಹುಟ್ಟುಹಾಕಿ ಮಾದ್ಯಮ ಲೋಕದಲ್ಲಿ ಸಂಚಲನ ಮೂಡಿಸಿದ್ದರು. ಶ್ರೀ ಅಶೋಕ್ ಬಾಬು ಅವರ ಅತ್ಮಕ್ಕೆ ಶಾಂತಿ ದೊರೆಯಲೆಂದು ಹಾಗೂ ಅವರ ಅಗಲಿಕೆಯಿಂದ ಉಂಟಾಗಿರುವ ದು : ಖ ವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕರುಣಿಸುವಂತೆಯೂ ಮುಖ್ಯಮಂತ್ರಿ ಅವರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.